ಈ) ಬೆಂಗಳೂರಿನ ಮಿನರ್ವ ಮಿಲ್ಸ್ ಹಾಗೂ ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್ಸ್ ಘೋಷಿಸಲ್ಪಟ್ಟಿದ್ದ ಬೀಗಮುದ್ರೆಯ ಮುಂದುವರಿಕೆಯನ್ನು ನಿಷೇಧಿಸಲಾಗಿದೆ. ಅಲ್ಲಿನ ವಿವಾದಗಳನ್ನು ನ್ಯಾಯ ಪಂಚಾಯತಿಗೆ ಒಪ್ಪಿಸಲಾಗಿದೆ. ಅದನ್ನು ಆಡಳಿತವರ್ಗದವರು ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಒಯ್ದಿದ್ದಾರೆ. ಮಿಕ್ಕ ಟೆಕ್ಸ್‌ಟೈಲ್ಸ್ ಮಿಲ್ಸ್‌ಗಳು ಹಣಕಾಸಿನ ತೊಂದರೆಯಿಂದ ಕೆಲಸ ಮಾಡದೆ ಇವೆ. ಈ ಮಿಲ್ಸ್‌ಗಳಲ್ಲಿ ಚಿಗಟೇರಿ ಮಿಲ್ಸ್, ದಾವಣಗೆರೆ. ಇಲ್ಲಿ ಕಾರ್ಮಿಕರು ಹಾಗೂ ಆಡಳಿತ ವರ್ಗದವರ ಮಧ್ಯೆ ಒಂದು ಒಪ್ಪಂದವಾಗಿ ಮಿಲ್ಸ್‌ನ್ನು ಮುಚ್ಚಲು ಒಪ್ಪಂದಕ್ಕೆ ಬಂದಿದ್ದಾರೆ. ಗಣೇಶರ್ ಟೆಕ್ಸ್‌ಟೈಲ್ಸ್ ಮಿಲ್ಸ್, ದಾವಣಗೆರೆಯ ವಿಷಯದಲ್ಲಿ ಹೊಸದಾಗಿ ಒಪ್ಪಂದಕ್ಕೆ ಕಾರ್ಮಿಕರಂ ಹಾಗೂ ಆಡಳಿತವರ್ಗದ ನಡುವೆ ಬರಲಾಗಿದೆ ಅದು ದೆಹಲಿಯ ಬಿ.ಐ.ಎಫ್.ಆರ್. ಮುಂದೆ ಹೋಗಿ ಅದರ ಶಿಫಾರಸಿನ ಪ್ರಕಾರ ಹಣಕಾಸಿನ ಸಹಾಯ ಪಡೆದು ಪುನರಾರಂಭವಾಗಬೇಕಾಗಿದೆ. ದಾವಣಗೆರೆಯ ಶ್ರೀ ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ಸ್ ಮಿಲ್ಸ್ ವಿಷಯದಲ್ಲೂ ಇದೇ ಕ್ರಮಗಳನ್ನು ಅನುಸರಿಸಬೇಕಾಗಿದೆ. ಮೈಸೂರಿನ ಕೆ.ಆರ್.ಮಿಲ್ಸ್ ವಿಷಯವೂ ಸಹ ದೆಹಲಿಯ ಬಿ.ಐ.ಎಫ್.ಆರ್ ಮುಂದೆ ಇದೆ. ಸಹಕಾರಿ ವಲಯದಲ್ಲಿರುವ ರಾಯಚೂರಿನ ಬಳ್ಳಾರಿ ಹಾಗೂ ಬಿಜಾಪುರ ಮಿಲ್ಸ್‌ಗಳ ವಿಷಯಗಳಲ್ಲಿ ಹಿಂದಿನ ಕಾರ್ಮಿಕ ಸಚಿವರು ಹಾಗೂ ಸಹಕಾರ ಸಚಿವರ ಸಮಿತಿಯೊಂದನ್ನು ರಚಿಸಲಾಗಿದೆ ಆ ಸಮಿತಿಯ ವಿಷಯವಸ್ತು ಪರಿಶೀಲಿಸುತ್ತಿದೆ. ಅವುಗಳನ್ನು ಪುನರಾರಂಭಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಶಿರಾ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ಬಗ್ಗೆ

೫೦೨೨. ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾದಲ್ಲಿ ಸಾರ್ವಜನಿಕ ಆಸ್ಪತ್ರೆ ಮಂಜೂರಾಗಿ ಸ್ಥಳದ ಆಯ್ಕೆಯಾಗಿದ್ದು ಲೋಕೋಪಯೋಗಿ ಹಾಗೂ ಹಿಂದಿನ ಮುಖ್ಯ ಮಂತ್ರಿಗಳು ಕಟ್ಟಡದ ಶಂಕುಸ್ಥಾಪನೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಟ್ಟಡದ ಕೆಲಸವನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು ?

ಇ) ಈಗಾಗಲೇ ಆಯ್ಕೆಯಾಗಿರುವ ನಿವೇಶನದ ಬದಲು ಬೇರೆ ನಿವೇಶನದಲ್ಲಿ ಕಟ್ಟಡ ಕಟ್ಟುವ ಯೋಜನೆ ಏನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು) —

ಅ) ಬಂದಿದೆ.

ಆ) ಸ್ಥಳದ ಬಗ್ಗೆ ವಿವಾದವಿರುವುದರಿಂದ ಆಸ್ಪತ್ರೆ ಕಟ್ಟಲು ನಿಧಾನವಾಗಿದೆ.

ಇ) ಬೇರೆ ನಿವೇಶನದ ಬಗ್ಗೆ ಪ್ರಸ್ತಾವನೆ ಬಂದಿದೆ. ಆದರೆ ಈ ಬಗ್ಗೆ ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಸಹಕಾರ ಇಲಾಖೆಯಲ್ಲಿ ಗೌರವ ಮಧ್ಯಸ್ಥದಾರರ ನೇಮಕಾತಿ ಬಗ್ಗೆ

೫೯೩೩. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಟ್ಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಕಾರ ಇಲಾಖೆಯಲ್ಲಿ ಪ್ರಸ್ತುತ ವರ್ಷಕ್ಕೆ ನೇಮಕಾತಿ ಮಾಡಿರುವ ಒಟ್ಟು ಗೌರವ ಮಧ್ಯಸ್ಥದಾರರ ಸಂಖ್ಯೆ.

ಆ) ಇವರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗಕ್ಕೆ ಸೇರಿದವರು.

ಇ) ಗೌರವ ಮಧ್ಯಸ್ಥದಾರರನ್ನಾಗಿ ನೇಮಕಾತಿ ಮಾಡಲು ವಿದ್ಯಾರ್ಹತೆ.

ಈ) ಗೌರವ ಮಧ್ಯಸ್ಥದಾರರ ಪಟ್ಟಿಯಿಂದ ಯಾವ ಕಾಯ್ದೆ ಕಲಂ ಅನ್ವಯ ಅನರ್ಹತೆಗೊಳಿಸಲಾಗುತ್ತದೆ,

ಉ) ಗೌರವ ಮಧ್ಯಸ್ಥರ ಬಗ್ಗೆ ಅವ್ಯವಹಾರ ಮುಂತಾದ ಬಗ್ಗೆ ಯಾವುದಾದರೂ ಅಪಮಾನಗಳು ಬಂದಿದೆಯೇ.